# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 129 ರಲ್ಲಿ ದಿನಾಂಕ: 17.04.2021 ರಂದು, ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ: 17.04.2021ರಂದು ವಾರ್ಡ್ ಸಂಖ್ಯೆ 129ರ ಏಪ್ರಿಲ್ ಮಾಹೆಯ ಮೂರನೇ ಶನಿವಾರದ ವಾರ್ಡ್‌ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಹಾಜರಿದ್ದ ಸದಸ್ಯರು:–

1. ಶ್ರೀ.ವಿಶ್ವನಾಥ್, ಅಧೀಕ್ಷಕ ಅಭಿಯಂತರರು ದಾಸರಹಳ್ಳಿ ವಲಯ ಹಾಗೂ ವಾರ್ಡ್ ಸಂಖ್ಯೆ–129ರ ನೋಡಲ್ ಅಧಿಕಾರಿಗಳು.
2. ಶ್ರೀ ಮಂಜುನಾಥ ಆರ್ ಮಾರ್ಷಲ್ ವಾರ್ಡ್–129
3. ಶ್ರೀಮತಿ ಮೀನಾ ಎನ್ ಘ.ತ್ಯಾ.ನಿ SWM ಸಂಪರ್ಕ ಕಾರ್ಯಕರ್ತರು, ವಾರ್ಡ್–129.
4. ಶ್ರೀಮತಿ ರಾಜೇಶ್ವರಿ ಎಸ್ ಘ.ತ್ಯಾ.ನಿ SWM ಸಂಪರ್ಕ ಕಾರ್ಯಕರ್ತರು, ವಾರ್ಡ್–129.
5. ಶ್ರೀಮತಿ ವಿಜಯ ರಾಘವನ್ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–129
6. ಶ್ರೀ ಸೂರಪ್ಪ ಸೂಪರ್ ವೈಸರ್ ವಾರ್ಡ್–129.
7. ಶ್ರೀಮತಿ ನಾಗತ್ನಮ್ಮ ಸೂಪರ್ ವೈಸರ್ ವಾರ್ಡ್–129.
8. ಶ್ರೀ ರಘು ಸೂಪರ್ ವೈಸರ್ ವಾರ್ಡ್–129.
9. ಶ್ರೀ ಬಾಲು ಸೂಪರ್ ವೈಸರ್ ವಾರ್ಡ್–129.

ವಾರ್ಡ್ ಸಂಖ್ಯೆ–129ರ ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು.

### ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀಗಂಧದ ಕಾವಲು ಮುಖ್ಯರಸ್ತೆ, ಹೆಲ್ತ್ ಬಡಾವಣೆ ನಾಗರಬಾವಿ ನಿವಾಸಿಯಾದ ಶ್ರೀಮತಿ ಸೋನಿ ಶರ್ಮ ರವರು ತಮ್ಮ ಮನೆಯ ಪಕ್ಕದಲ್ಲಿ ಫುಟ್ ಪಾತ್ ಮೇಲೆ ಬೀಡಾ ಸ್ಟಾಲ್ ಅಂಗಡಿ ನಡೆಸುತ್ತಿದ್ದು, ಇಲ್ಲಿಗೆ ಬರುವ ಗ್ರಾಹಕರು ತಮ್ಮ ಮನೆಯ ಗೇಟ್ ಮುಂಭಾಗಕ್ಕೆ ಬಂದು ಧೂಮಪಾನ ಮಾಡುತ್ತಿರುವುದರಿಂದ ಮನೆಯಲ್ಲಿ ವಾಸವಿರುವ ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ವಸತಿ ಪ್ರದೇಶದಲ್ಲಿ ಇರುವ ಅಂಗಡಿಯ ವಾಣಿಜ್ಯ ಪರವಾನಗಿಯನ್ನು ಪರಿಶೀಲಿಸಿ ಅನಧಿಕೃತವಾಗಿದ್ದಲ್ಲಿ ತೆರವುಗೊಳಿಸಬೇಕೆಂದು ಸಹಾಯಕ ಅಭಿಯಂತರರು, ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರಲ್ಲಿ ಈ ಹಿಂದಿನ ಸಭೆಯಲ್ಲಿ ಕೋರಲಾಗಿ ಅದರಂತೆ ಸದರಿ ಬೀಡಾ ಸ್ಟಾಲ್ ಅಂಗಡಿ ಮಾಲೀಕರಿಗೆ ಪಾಲಿಕೆ ವತಿಯಿಂದ ದಂಡ

ವಿಧಿಸಲಾಗಿರುತ್ತದೆ. ಆದರೆ ಅಂಗಡಿ ಮಾಲೀಕರು ಮನಃ ಸಿಗರೇಟ್, ಗುಟ್ಕಾ ಮುಂತಾದ ವಸ್ತುಗಳನ್ನು ವಸತಿ ಪ್ರದೇಶದಲ್ಲಿ ಮಾರಾಟ ಮಾಡುತ್ತಿದ್ದು ಸದರಿಯವರ ಅಂಗಡಿಯ ವಾಣಿಜ್ಯ ಪರವಾನಗಿಯನ್ನು ಪರಿಶೀಲಿಸಿ ಅನಧಿಕೃತವಾಗಿದ್ದಲ್ಲಿ ಪೋಲೀಸ್ ಇಲಾಖೆಯ ಸಹಯೋಗದೊಂದಿಗೆ ಶೀಘ್ರವೇ ತೆರವುಗೊಳಿಸಬೇಕೆಂದು ಸ.ಕಾ.ಅ (ಘ.ತ್ಯಾ.ನಿ), ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರಲ್ಲಿ ಕೋರಿದರು.

ಕ್ರಮ: ಸ.ಕಾ.ಅ (ಘ.ತ್ಯಾ.ನಿ)

- ಈ ಹಿಂದೆ ಚರ್ಚಿಸಲಾದ ವಿಷಯ್ಕಕೆ ಸಂಬಂಧಪಟ್ಟಂತೆ ಅನೇಕ ವಿಷಯಗಳು ಸಿವಿಲ್ ಕಾಮಗಾರಿಗಳಿಗೆ ಸಂಬಂಧಿಸಿದ್ದು, ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಸದರಿ ದೂರುಗಳನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಕ್ರಮ ವಹಿಸಬೇಕಾಗುವುದೆಂದು ನೋಡಲ್ ಅಧಿಕಾರಿಗಳು ತಿಳಿಸಿರುತ್ತಾರೆ.
- ಘ.ತ್ಯಾ.ನಿ ಸಂಬಂಧಪಟ್ಟಂತೆ ಅನೇಕ ಬ್ಲಾಕ್ ಗಳಲ್ಲಿ ಆಟೋ ಟಿಪ್ಪರ್ ಗಳು ಗೈರು ಹಾಜರಾಗುತ್ತಿರುವುದರಿಂದ ಸಮರ್ಪಕವಾಗಿ ತ್ಯಾಜ್ಯ ವಿಲೇವಾರಿ ಆಗುತ್ತಿಲ್ಲವೆಂದು ಸಭೆಯಲ್ಲಿ ಚರ್ಚಿಸಲಾಗಿ ಹಾಗೂ ತತ್ಸಂಬಂಧ ಹಾಜರಿದ್ದ ಸಂಪರ್ಕ ಕಾರ್ಯಕರ್ತರುಗಳು ದಾಖಲೆಗಳನ್ನು ನೀಡಿರುವ ಹಿನ್ನೆಲೆಯಲ್ಲಿ ಕೂಡಲೇ ಪರಿಶೀಲಿಸಿ ಕ್ರಮ ವಹಿಸಲು ಹಾಗೂ ಗುತ್ತಿಗೆದಾರರಿಗೆ ಸೂಚನಾ ಪತ್ರ ನೀಡಲು ನಿರ್ಣಯಿಸಲಾಗಿದೆ.

  ಕ್ರಮ: ಸ.ಕಾ.ಅ (ಘ.ತ್ಯಾ.ನಿ)

- ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ವಾರಕ್ಕೊಮ್ಮೆ ತಪ್ಪದೇ ಸಭೆ ನಡೆಸಿ ವರದಿ ಸಲ್ಲಿಸುವಂತೆ ಜಂಟಿ ಆಯುಕ್ತರು ನಿರ್ದೇಶಿಸಿದ್ದು, ಇದುವರೆಗೂ ವರದಿ ಸಲ್ಲಿಸಿರುವುದಿಲ್ಲವೆಂದೂ ಹಾಗೂ ಮುಂದಿನ ವಾರ್ಡ್ ಸಮಿತಿ ಸಭೆಯೊಳಗೆ ವಾರಕ್ಕೊಮ್ಮೆ ಘನ ತ್ಯಾಜ್ಯ ನಿರ್ವಹಣೆಯ ಅಧಿಕಾರಿಗಳು ಸಭೆ ನಡೆಸಿ ವರದಿ ಸಲ್ಲಿಸುವಂತೆ ಮಾರ್ಚ್ ಮಾಹೆಯ ದಿನಾಂಕ:20.03.2021ರ ಸಭೆಯಲ್ಲಿಯೇ ನೋಡಲ್ ಅಧಿಕಾರಿಗಳು ಸೂಚಿಸಿದ್ದರೂ ಇಲ್ಲಿಯವರೆಗೂ ಕಾರ್ಯರೂಪಕ್ಕೆ ಬಂದಿರುವುದಿಲ್ಲವಾದ್ದರಿಂದ ಮುಂದಿನ ವಾರ್ಡ್ ಸಮಿತಿ ಸಭೆಯೊಳಗೆ ವಾರಕ್ಕೊಮ್ಮೆ ಘನ ತ್ಯಾಜ್ಯ ನಿರ್ವಹಣೆಯ ಅಧಿಕಾರಿಗಳು ಸಭೆ ನಡೆಸಿ ವರದಿ ಸಲ್ಲಿಸುವಂತೆ ಮತ್ತೊಮ್ಮೆ ನೋಡಲ್ ಅಧಿಕಾರಿಗಳು ಸೂಚಿಸಿದರು.
- ತಾತ್ಕಾಲಿಕ ಒಣ ತ್ಯಾಜ್ಯ ಸಂಗ್ರಹಣಾ ಘಟಕ ನಿರ್ಮಾಣವಾಗಿದ್ದು, ಪ್ರತ್ಯೇಕವಾಗಿ ನಿಯೋಜಿಸಿರುವ ವಾಹನಗಳಿಂದ ಒಣ ಕಸಗಳನ್ನು ಸದರಿ ಒಣ ತ್ಯಾಜ್ಯ ಸಂಗ್ರಹಣಾ ಘಟಕದಲ್ಲಿ ಸಂಗ್ರಹಿಸಲಾಗುತ್ತಿರುವುದಾಗಿ ತಿಳಿದು ಬಂದಿರುತ್ತದೆ. ಆದರೆ ಸದರಿ ಘಟಕದ ನಿರ್ವಹಣೆ ಸಮರ್ಪಕವಾಗಿ ಆಗುತ್ತಿಲ್ಲವಾದ್ದರಿಂದ ಸ್ಥಳೀಯ ನಿವಾಸಿಗಳಿಂದ ದೂರು ಬರುವ ಸಂಭವವಿರುವುದರಿಂದ ನಿಯಮಾನುಸಾರ ಸಮರ್ಕವಾಗಿ ಸದರಿ ಕೇಂದ್ರವನ್ನು ನಿರ್ವಹಣೆ ಮಾಡಲು ಅಗತ್ಯ ಕ್ರಮ ವಹಿಸಬೇಕಾಗಿರುತ್ತದೆ.

  ಕ್ರಮ: ಸ.ಕಾ.ಅ (ಘ.ತ್ಯಾ.ನಿ)

- ಮಸ್ಟರಿಂಗ್ ಪಾಯಿಂಟ್ ನಲ್ಲಿ ಪೌರ ಕಾರ್ಮಿಕರ ಸುರಕ್ಷತಾ ದೃಷ್ಟಿಯಿಂದ ಕೈ ಗವುಸು, ಮಾಸ್ಕ್ ಹಾಗೂ ಇನ್ನಿತರೇ ಸುರಕ್ಷತಾ ಧರಿಸುಗಳನ್ನು (Safety wears) ಕೇಂದ್ರ ಕಛೇರಿಯಿಂದ ಪಡೆದು ತುರ್ತಾಗಿ ವಿತರಿಸಲು ಕಿರಿಯ ಆರೋಗ್ಯ ಪರಿವೀಕ್ಷರಿಗೆ ಸೂಚಿಸಲಾಯಿತು.

  ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–129

- ಕಳೆದ ಸಭೆಯಲ್ಲಿ ದಾಖಲಾದ ಬೀದಿ ದೀಪ ನಿರ್ವಹಣೆಯ ದೂರನ್ನು ನಿಗಧಿತ ಸಮಯದೊಳಗೆ ಪರಿಹರಿಸಲಾದ ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರಿಗೆ ಸಭೆಯಲ್ಲಿ ಅಭಿನಂದನೆ ಸಲ್ಲಿಸಲಾಯಿತು.

ಸಹಾಯ ಆಪ್ ನಲ್ಲಿ ದಾಖಲಾಗಿರುವ ದೂರುಗಳಿಗೆ ಸಂಬಂಧಿಸಿದಂತೆ ಆದ್ಯತೆ ಮೇರೆಗೆ ಕ್ರಮ ವಹಿಸಲು ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೂ ಸೂಚಿಸುತ್ತಾ ಅಂದಿನ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಮೇಲಿನ ದೂರುಗಳಿಗೆ ಸಂಬಂಧಿಸಿದ ಅಧಿಕಾರಿಗಳು, ಅವರ ವ್ಯಾಪ್ತಿಯ ದೂರುಗಳಿಗೆ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಕೈಗೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ತಪ್ಪದೇ ವರದಿ ಮಾಡಲು ತಿಳಿಸಿದೆ.

| | |
|---|---|
| ಸಹಿ/– | ಸಹಿ/– |
| ಕಾರ್ಯದರ್ಶಿಗಳು ವಾರ್ಡ್ ಸಮಿತಿ | ನೋಡಲ್ ಅಧಿಕಾರಿಗಳು |
| ವಾರ್ಡ್ ಸಂಖ್ಯೆ–129 | ವಾರ್ಡ್ ಸಂಖ್ಯೆ–129 |

***ಪ್ರತಿಯನ್ನು:***

1. ಆಪ್ತಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲು ಕೋರಿದೆ.
2. ಜಂಟಿ ಆಯುಕ್ತರು ರಾರಾನಗರ ವಲಯರವರ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು ರಾರಾನಗರ ವಲಯರವರ ಮಾಹಿತಿಗಾಗಿ.
4. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.
7. ಕಛೇರಿ ಪ್ರತಿ.